
# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 4(1)(ಬಿ) ರ ಅನ್ವಯ

**1. <u>ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ) ಕಛೇರಿಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ</u>**

ಅ.√ ಕಛೇರಿಯ ಹೆಸರು : ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ)
ಬೃಹತ್ ಬೆಂಗಳೂರುಮಹಾನಗರ ಪಾಲಿಕೆ
ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣ 2ನೇ ಮಹಡಿ
ಎಸ್.ಜೆ.ಪಿ ರಸ್ತೆ ಬೆಂಗಳೂರು–560002
ದೂರವಾಣಿ ಸಂಖ್ಯೆ: 080– 22975855

ಆ. √ ರಚನೆ :



*ಕಾರ್ಯಗಳು ಮತ್ತು ಕರ್ತವ್ಯಗಳು:*

*ಆರೋಗ್ಯ ವೈದ್ಯಕೀಯ ಇಲಾಖೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಂದು ಪ್ರಮುಖವಾದ ಇಲಾಖೆಯಾಗಿರುತ್ತದೆ. ಈ ಕಛೇರಿಯ ವ್ಯಾಪ್ತಿಯಲ್ಲಿ 2 ರೆಫೆರಲ್ ಆಸ್ಪತ್ರೆಗಳಿರುತ್ತವೆ.*

1. *ಬನಶಂಕರಿ ರೆಫರಲ್ ಆಸ್ಪತ್ರೆ*
2. *ಜೆ.ಜೆ.ಆರ್ ನಗರ ರೆಫರಲ್ ಆಸ್ಪತ್ರೆ*

*ಮೊದಲನೇಯದಾಗಿ ಬನಶಂಕರಿ ರೆಫರಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿನ ಹೆರಿಗೆ ಆಸ್ಪತ್ರೆಗಳ ವಿವರ ಇಂತಿದೆ* ***1.*** *ವಿಲ್ಸನ್ ಗಾರ್ಡನ್ ಹೆರಿಗೆ ಆಸ್ಪತ್ರೆ,* ***2.*** *ಪೊಬ್ಬತ್ತಿ ಹೆರಿಗೆ ಆಸ್ಪತ್ರೆ* ***3.*** *ಯಡಿಯೂರು ಹೆರಿಗೆ ಆಸ್ಪತ್ರೆ* ***4.*** *ಜಯನಗರ ಹೆರಿಗೆ ಆಸ್ಪತ್ರೆ.*

*ಎರಡನೇಯದಾಗಿ ಜೆ.ಜೆ.ಆರ್ ನಗರ ರೆಫರಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿನ ಹೆರಿಗೆ ಆಸ್ಪತ್ರೆಗಳ ವಿವರ ಇಂತಿದೆ* ***1.*** *ಆಜಾದ್ ನಗರ ಹೆರಿಗೆ ಆಸ್ಪತ್ರೆ* ***2.*** *ಸಿರಸಿ ರಸ್ತೆ ಹೆರಿಗೆ ಆಸ್ಪತ್ರೆ* ***3.*** *ಗವಿಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ* ***4.*** *ಎನ್.ಆರ್. ಕಾಲೋನಿ ಹೆರಿಗೆ ಆಸ್ಪತ್ರೆ*

*ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿ ವರ್ಗದವರು ಸರ್ಕಾರಿ ಅಧಿಸೂಚಿತ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಶುಶ್ರೂಷಣೆಯನ್ನು ಪಡೆದು ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವು ಮರುಪಾವತಿಸಲು ಕೋರಿ ವೈದ್ಯಕೀಯ ಬಿಲ್ಲುಗಳನ್ನು ಸಲ್ಲಿಸುವುದರಿಂದ ಅವುಗಳನ್ನು ಪರಿಶೀಲಿಸಿ, ಸರ್ಕಾರಿ ಷೆಡ್ಯೂಲ್ ದರಗಳ ಪಟ್ಟಿಯಂತೆ ಅರ್ಹವಾಗಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಶಿಫಾರಸ್ಸಿನೊಂದಿಗೆ ಕಡತಗಳನ್ನು ಮೇಲಾಧಿಕಾರಿಗಳಿಗೆ ವಿಲೇವಾರಿ ಮಾಡುವುದು.*

*ಮಾನ್ಯ ಆಯುಕ್ತರು ರವರ ಆದೇಶದ ಸಂಖ್ಯೆ ಬಿ12(1)ಪಿಆರ್/394/2010–11 ದಿನಾಂಕ: 05–07–2010 ರ ಆದೇಶದ ರೀತ್ಯಾ*

1. *"ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ 3 ರಿಂದ 5 ವರ್ಷಗಳವರೆಗೆ ಹಾಗೂ 5 ವರ್ಷಗಳಿಗೂ ಮೇಲ್ಪಟ್ಟು ಅವಧಿಗೆ ತಡೆ ಹಿಡಿಯಲಾದ ವಾರ್ಷಿಕ ವೇತನ ಬಡ್ತಿಗಳನ್ನು ಕಾಲ ವಿಳಂಬ ಮನ್ನಾ ಮಾಡಿ ಮಂಜೂರು ಮಾಡುವ ಅಧಿಕಾರ*
2. *"ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ಅಧಿಕಾರ*
3. *"ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ 30 ದಿನಗಳ ಗಳಿಕೆ / ಪರಿವರ್ತಿತ ರಜೆಯನ್ನು ಮಂಜೂರು ಮಾಡುವ ಅಧಿಕಾರ*
4. *"ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ 30 ದಿನಗಳ ಗಳಿಕೆ ರಜೆ ನಗದೀಕರಿಸಲು ಮಂಜೂರಾತಿ ನೀಡುವ ಅಧಿಕಾರ*
5. *"ಬಿ", "ಸಿ" ಮತ್ತು "ಡಿ" ವೃಂದದ ಅಧಿಕಾರಿ / ನೌಕರರುಗಳಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ, 15 ವರ್ಷಗಳ ವಿಶೇಷ ಕಾಲಮಿತಿ ವೇತನ ಶ್ರೇಣಿ ಮತ್ತು 20 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಅಧಿಕಾರ*
6. *ವಲಯ ವ್ಯಾಪ್ತಿಯಲ್ಲಿನ ರೆಫರಲ್ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಂಬುಲೇನ್ಸ್ ವಾಹನಗಳ ದುರಸ್ಥಿಗಳಿಗೆ ಸಂಬಂಧಿಸಿದಂತೆ ರೂ. 25000/– ಗಳ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ*
7. *ಎ.ಬಿ.ಸಿ ಮತ್ತು "ಡಿ" ವೃಂದದ ಅಧಿಕಾರಿ / ನೌಕರರ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟವರಿಗೆ ವಿಶೇಷ ವೈಯಕ್ತಿಕ ವೇತನ ಬಡ್ತಿ ಹಾಗೂ ಗರ್ಭಪಾತ ಮತ್ತು ಹೆರಿಗೆ ರಜೆಯನ್ನು 1958 ರ ಕೆ.ಸಿ.ಎಸ್.ಆರ್. ನಿಯಮಾವಳಿಗಳ ಅಡಿಯಲ್ಲಿ ಪರಿಶೀಲಿಸಿ ಕಡತವನ್ನು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವ ಅಧಿಕಾರ*

*ದಕ್ಷಿಣ ವಲಯದಲ್ಲಿ ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ಕಾರ್ಯಕ್ರಮಗಳು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲಾ ಮಕ್ಕಳಿಗೆ ಹೆಚ್.ಐ.ವಿ. ಏಡ್ಸ್ ಬಗ್ಗೆ ಮತ್ತು ಲೈಂಗಿಕ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಅಗತ್ಯವಿರುವಂತಹ ಔಷಧಿಗಳೊಂದಿಗೆ ವೈದ್ಯರುಗಳು / ಸಿಬ್ಬಂದಿಯನ್ನು ನಿಯೋಜಿಸುವುದು ಹಾಗೂ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೋಳ್ಳುವುದು.*

.

***1. ಅದರ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು:***

- *ಡಾ॥ ಎಲ್.ಟಿ ಗಾಯತ್ರಿ ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ) :– ಆರೋಗ್ಯ ವೈದ್ಯಕೀಯ ಇಲಾಖೆಯ ದಕ್ಷಿಣ ವಲಯದ ಮುಖ್ಯಸ್ಥರಾಗಿರುತ್ತಾರೆ. ಕಾಯ್ದೆಯಲ್ಲಿ ಪ್ರದತ್ತವಾದ ಎಲ್ಲಾ ಅಧಿಕಾರವನ್ನು ಹೊಂದಿರುತ್ತಾರೆ ಹಾಗೂ ದಕ್ಷಿಣ ವಲಯದ ಎಲ್ಲಾ ರೆಫರಲ್ ಆಸ್ಪತ್ರೆ, ಹೆರಿಗೆ ಆಸ್ಪತ್ರೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನು ಹೊಂದಿರುತ್ತಾರೆ.*

- *ಶ್ರೀ ಆರ್. ಮುನಿರಾಜು (ದ್ವಿತೀಯ ದರ್ಜೆ ಸಹಾಯಕರು) :– ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ) ರವರ ಸೂಚನೆಯಂತೆ, ಕೆಲಸವನ್ನು ನಿರ್ವಹಿಸುವುದು ವರದಿಗಳನ್ನು ಅಧಿಕಾರಯವರಿಗೆ ಒದಗಿಸುವುದು ಹಾಗೂ ಸ್ವೀಕೃತಿ ಮತ್ತು ರವಾನೆ ಕಾರ್ಯಗಳು ಹಾಗೂ ನರ್ಸಿಂಗ್ ತರಬೇತಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಕಛೇರಿ ಆದೇಶ ಪತ್ರವನ್ನು ನೀಡುವುದು.*

***3. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು***

*ಕಛೇರಿಯ ಸಿಬ್ಬಂದಿಯವರು ಈ .ಕ್ಛೇರಿಗೆ ಬರುವಂತಹ ಕಡತಗಳನ್ನು ಸ್ವೀಕರಿಸಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ಸರ್ಕಾರಿ ಸಂಖ್ಯೆ: ಡಿ.ಪಿಇ.ಆರ್/ಎಸ್.ಎಮ್.ಆರ್/2000 ದಿನಾಂಕ: 22–01–2001 ರ ಷೆಡ್ಯೂಲ್ ನಲ್ಲಿ ಸಂಬಂಧಿಸಿದ ಖಾಯಿಲೆಗೆ ಸೂಚಿಸಿದ ದರಗಳಿಗೆ ಮೀರದಂತೆ ನೌಕರರು ಚಿಕಿತ್ಸೆ ಪಡೆಯಲು ಹಾಗೂ ವೈದ್ಯಕೀಯ ವೆಚ್ಚ ಮರು ಪಾವತಿಸಲು ನಿಯಮಗಳ ಅಡಿಯಲ್ಲಿ ಪರಿಶೀಲಿಸಿ ನಿಗಧಿತ ಸಮಯದೊಳಗೆ ಕಡತವನ್ನು ಮೇಲಾಧಿಕಾರಿಗಳ ಆದೇಶದಂತೆ ಕ್ರಮ ವಹಿಸುವುದು.*

*ಹಾಗೂ ನೌಕರರುಗಳಿಗೆ ಲಭ್ಯವಿರುವ ಸೇವಾ ಸವಲತ್ತುಗಳ ಮಂಜೂರಾತಿ ಬಗ್ಗೆ ಈ ಕಛೇರಿಗೆ ಬರುವಂತಹ ಕಡತಗಳನ್ನು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಅಡಿಯಲ್ಲಿ ಪರಿಶೀಲಿಸಿ ನಿಗಧಿತ ಸಮಯದೊಳಗೆ ಕಡತಗಳನ್ನು ಮೇಲಾಧಿಕಾರಿಗಳ ಅವಗಾಹನೆಗೆ ಹಾಗೂ ಮುಂದಿನ ಆದೇಶಕ್ಕೆ ಮಂಡಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶದಂತೆ ಮುಂದಿನ ಸೂಕ್ತ ಕ್ರಮ ವಹಿಸುವುದು.*

***4. ಅದರ ಕಾರ್ಯಗಳ ನಿರ್ವಾಹಣೆಗೆ ಅದು ರೂಪಿಸಿರುವ ಸೂತ್ರಗಳನ್ನು:***

*ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಅಡಿಯಲ್ಲಿ ನಿಗಧಿಪಡಿಸಿರುವ ಮಾನದಂಡಗಳು ಮತ್ತು ಮಾನ್ಯ ಆಯಕ್ತರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಿ ಕ್ರಮ ವಹಿಸುವುದು.*

***5. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳನ್ನು***

1. *ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು (ಕೆ.ಸಿ.ಎಸ್.ಆರ್)* ***2.*** *ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ)* ***3.*** *ಕರ್ನಾಟಕ ಖಜಾನೆ ಸಂಹಿತೆ (ಕೆ.ಟಿ.ಸಿ)* ***4.*** *ಸಾದಿಲ್ವಾರು ವೆಚ್ಚದ ಕೈಪಿಡಿ (ಎಂ.ಈ.ಸಿ)* ***5.*** *ಬಜೆಟ್ ಕೈಪಿಡಿ (ಬಿ.ಎಂ)* ***6.*** *ಮಾಹಿತಿ ಹಕ್ಕು ಅಧಿನಿಯಮ, 2005 (ಆರ್.ಟಿ.ಐ)* ***7.*** *ಕರ್ನಾಟಕ ರಾಜ್ಯ ಪತ್ರ – ವೈದ್ಯಕೀಯ ವೆಚ್ಚದ (ದರಪಟ್ಟಿಯ ಪುಸ್ತಕ)* ***8.*** *ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು–2008 ರಲ್ಲಿ ನಿಗಧಿಪಡಿಸಿರುವ ಮಾನದಂಡಗಳು ಹಾಗೂ ಮಾನ್ಯ ಆಯುಕ್ತರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವುದು.*

***6. ಇಲಾಖೆ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಪಟ್ಟಿ.***

2. ಮುಖ್ಯವಾದ ಆದೇಶಗಳು
3. ಸಾಮಾನ್ಯ ಸೂಚನೆಗಳು
4. ನಿಯೋಜನೆಯ ಆದೇಶಗಳು
5. ನೇಮಕಾತಿ ಆದೇಶಗಳು
6. ಸಿಬ್ಬಂದಿ ಸೇವಾಪುಸ್ತಕ
7. ಇಂಡೆಂಟ್ ಪುಸ್ತಕ
8. ನಗದು ಪುಸ್ತಕ
9. ಕಿರ್ದಿ ಪುಸ್ತಕ
10. ವೇತನ ಬಟವಾಡೆ ಪುಸ್ತಕ
11. ದಾಸ್ತಾನು ಪುಸ್ತಕ
12. ಪಿ.ಆರ್.ರಿಜಿಸ್ಟ್ರಾರ್ ಪುಸ್ತಕ
13. ಟಪಾಲ್ ಪುಸ್ತಕ
14. ಎಲ್.ಪಿ.ಸಿ
15. ಹಾಜರಾತಿ ಪುಸ್ತಕ

***7. ಅದರ ಕಾರ್ಯಗ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು***

ಯಾವುದು ಇಲ್ಲ

***8. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳು, ಪರಿಷತ್ತುಗಳ ಸಮಿತಿಗಳ ಮತ್ತು ಇತರೆ ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ***

ಯಾವುದು ಇಲ್ಲ

***9. ಅದರ ಅಧಿಕಾರಿಗಳ ಮತ್ತು ನೌಕರರ ವರ್ಗದವರ ನಿರ್ದೇಶಿಕೆಯನ್ನು:-***

| ಕ್ರ ಸಂ | ಹೆಸರು ಮತ್ತು ಹುದ್ದೆ | ಕಛೇರಿಯ ವಿಳಾಸ | ದೂರವಾಣಿ |
|---|---|---|---|
| 1 | ಡಾ॥ ಎಲ್.ಟಿ ಗಾಯಿತ್ರಿ<br>ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ)<br>(ಓ.ಓ.ಡಿ, ಮುಖ್ಯ ಆರೋಗ್ಯಾಧಿಕಾರಿ) | ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ)<br>ಬೃಹತ್ ಬೆಂಗಳೂರುಮಹಾನಗರ ಪಾಲಿಕೆ<br>ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣ 2ನೇ<br>ಮಹಡಿ ಎಸ್.ಜೆ.ಪಿ ರಸ್ತೆ<br>ಬೆಂಗಳೂರು-560002 | 080- 22975855 |
| 2 | ಶ್ರೀ ಆರ್. ಮುನಿರಾಜು<br>ದ್ವಿತೀಯ ದರ್ಜೆ ಸಹಾಯಕರು | | |

***10. ಅದರ ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯು ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವ ಧನವನ್ನು :***

| ಕ್ರ ಸಂ | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ | ಮೂಲ ವೇತನ |
|---|---|---|---|
| 1 | ಡಾ॥ ಎಲ್.ಟಿ ಗಾಯಿತ್ರಿ<br>ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ) | 20025-28275 | 30975 |
| 2 | ಶ್ರೀ ಆರ್. ಮುನಿರಾಜು<br>ದ್ವಿತೀಯ ದರ್ಜೆ ಸಹಾಯಕರು | 5800-10500 | 6375 |

***11. ಎಲ್ಲಾ ಯೋಜನೆಗಳ ವಿವರಗಳನ್ನು, ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು, ಮತ್ತು ಮಾಡಲಾದ ಬಟವಾಡೆಗಳ ವರದಿಗಳನ್ನು, ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಅಯವ್ಯಯವನ್ನು:-***

*ಯಾವುದು ಇಲ್ಲ*

***12. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು, ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:-***

*ಯಾವುದು ಇಲ್ಲ*

***13. ಅದು ನೀಡಿರುವ ರಿಯಾತಿಗಳನ್ನು, ಅನುಮತಿ ಪತ್ರಗಳನ್ನು, ಅಥವಾ ಅಧಿಕಾರಿ ಪತ್ರಗಳನ್ನು, ಪಡೆಯುವವರ ವಿವರಗಳನ್ನು:-***

*ಯಾವುದು ಇಲ್ಲ*

***14. ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸುವ ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು:-***

*ಯಾವುದು ಇಲ್ಲ*

***15. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು, ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:-***

*ಯಾವುದು ಇಲ್ಲ*

***16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳನ್ನು:-***

| ಕ್ರ ಸಂ | ಇಲಾಖೆ / ಕಛೇರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ ಅಧಿಕಾರಿ |
|---|---|---|---|---|
| 1 | ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ) | ಕಛೇರಿ ವ್ಯವಸ್ಥಾಪಕರು | ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದ) | ಅಪರ ಆಯುಕ್ತರು (ದಕ್ಷಿಣ) |

***17. ನಿಯಮಿಸಬಹುದಾದಂತಹ ಇತರೆ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು, ಅಂದಿನವರೆಗೆ ಪರಿಷ್ಕರಿಸತಕ್ಕದ್ದು***

*ಕಾಲಕಾಲಕ್ಕೆ ಪರಿಷ್ಕರಿಸಲಾಗುವುದು*

*ಆರೋಗ್ಯ ವೈದ್ಯಕೀಯ ಇಲಾಖೆಗೆ ಸಂಬಂಧಿಸಿದಂತೆ, ಸಾಮಾನ್ಯ ಮಾಹಿತಿಗಳನ್ನು ಪಾಲಿಕೆಯ ವೆಬ್ ಸೈಟ್‌ನಲ್ಲಿ ಅಳವಡಿಸಲಾಗಿದೆ ಪಾಲಿಕೆ ವೆಬ್ ಸೈಟ್‌ನ ವಿಳಾಸ* **www.bbmp.gov.in**

*--- ಸಹಿ ---*

***ಆರೋಗ್ಯಾಧಿಕಾರಿ (ತಾ.ಮ.ಕು.ಕ) (ದಕ್ಷಿಣ)***
***ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ***